1. ಒಂದು ಸಂಸ್ಥೆಯು 2,00,000 ಘಟಕಗಳಿಗೆ ಕ್ರಿಯಾಶೀಲತೆಯ ಬಜೆಟ್ ನಿರ್ಮಿಸಿದೆ – ವಸ್ತುಗಳು – ರೂ. 30,000; ಕಾರ್ಮಿಕರಿಗೆ – ರೂ. 40,000; ಸ್ಥಿರ ವೆಚ್ಚಗಳು – ರೂ. 88,000 ಇದ್ದು, 2,50,000 ಘಟಕಗಳಿಗೆ ತಗಲುವ ಒಟ್ಟು ವೆಚ್ಚ ಏನು ?

(1) ರೂ. 1,75, 500
(2) ರೂ. 1,58,000
(3) ರೂ. 1,97,500
(4) ರೂ. 1,80,000

2. ಟಂಡನ್ ಸಮಿತಿಯ ಸಾಲ ರೂಢಿಗಳ ಬಗ್ಗೆ ಶಿಫಾರಸು ಮಾಡಿರುವ ಮೂರು ವಿಧಾನಗಳು:

(a) ಸಾಲಗಾರನು ಕನಿಷ್ಠ 25% ಕೆಲಸ ಬಂಡವಾಳದ ಅಂತರವನ್ನು ದೀರ್ಘಕಾಲದ ನಿಧಿಯಿಂದ ನೀಡಬೇಕು ಅದೆಂದರೆ ಮಾಲಿಕತ್ವದ ನಿಧಿಗಳು ಮತ್ತು ವಾಯಿದೆಯ ಸಾಲಗಳು
(b) ಸಾಲಗಾರನು ಒಟ್ಟು ಪ್ರಸ್ತುತ ಆಸ್ತಿಗಳ ಕನಿಷ್ಠ 25% ನ್ನು ದೀರ್ಘಕಾಲದ ನಿಧಿಯಿಂದ ಒದಗಿಸಬೇಕು.
(c) ಸಾಲಗಾರನ ದೀರ್ಘಕಾಲದ ನಿಧಿಯಿಂದ ಇಡೀ ಕೋರ್ (ತಿರುಳು) ಸ್ವತ್ತುಗಳ ಮಟ್ಟಿಗೆ ಮತ್ತು ಪ್ರಸ್ತುತ ಆಸ್ತಿಗಳ ಕನಿಷ್ಠ 25% ನೀಡಬೇಕು.
(d) ಸಾಲಗಾರನು ಪ್ರಸ್ತುತ ಆಸ್ತಿಗಳ ಕನಿಷ್ಠ 25% ಕೊಡುಗೆ ನೀಡಬೇಕು.

ಮೇಲಿನ ಶಿಫಾರಸುಗಳಲ್ಲಿ ಯಾವುದು ನಿಜ:

(1) a), (b) ಮತ್ತು (c)
(2) (a), (b) ಮತ್ತು (d)
(3) (a), (c) ಮತ್ತು (d)
(4) (b), (c) ಮತ್ತು (d)

3. ಚೋರ್ ಸಮಿತಿ ನೇತೃತ್ವ ವಹಿಸಿದ್ದವರು ___________

(1) ಎಸ್.ಬಿ. ಚೋರ್
(2) ಸಿ.ಬಿ. ಚೋರ್
(3) ಕೆ.ಬಿ. ಚೋರ್
(4) ಟಿ.ಬಿ. ಚೋರ್

4. ಒಂದು ಸಂಸ್ಥೆಯ ಹೆಚ್ಚಿನ ಆರ್ಥಿಕ ಅನುಕೂಲ (ಸಾಧನಮಾರ್ಗ) ಮತ್ತು ಕಡಿಮೆ ಕಾರ್ಯಾಚರಣೆಯ ಸಾಧನಮಾರ್ಗದ ಲಕ್ಷಣಗಳನ್ನು ರೂಪಿಸುವುದು:

(1) ಹೆಚ್ಚಿನ ಸ್ಥಿರ ಹಣಕಾಸು ವೆಚ್ಚ ; ಹೆಚ್ಚಿನ ಸ್ಥಿರ ಉತ್ಪಾದನೆಯ ವೆಚ್ಚ
(2) ಹೆಚ್ಚಿನ ಸ್ಥಿರ ಹಣಕಾಸು ವೆಚ್ಚ ; ಕಡಿಮೆ ಸ್ಥಿರ ಉತ್ಪಾದನೆಯ ವೆಚ್ಚ
(3) ಕಡಿಮೆ ಸ್ಥಿರ ಹಣಕಾಸು ವೆಚ್ಚ ; ಹೆಚ್ಚಿನ ಸ್ಥಿರ ಉತ್ಪಾದನೆಯ ವೆಚ್ಚ
(4) ಕಡಿಮೆ ಸ್ಥಿರ ಹಣಕಾಸು ವೆಚ್ಚ ; ಕಡಿಮೆ ಸ್ಥಿರ ಉತ್ಪಾದನೆಯ ವೆಚ್ಚ

5. ಹೊಂದಿಸಿ ಬರೆಯಿರಿ:

| ಪಟ್ಟಿ – I | ಪಟ್ಟಿ – II |
|---|---|
| (A) ನಿರ್ಬಂಧಿತ ಅನುಮೋದನೆ | (I) C ಗೆ ಪಾವತಿಸಿ ಅಥವಾ ಅಮಾನ್ಯತಾ ಆದೇಶದ ತಿಳುವಳಿಕೆ ಪತ್ರದ ಮನ್ನಾ |
| (B) ಷರತ್ತುಬದ್ಧ ಅನುಮೋದನೆ | (II) C ಗೆ ಪಾವತಿಸಿ ಅಥವಾ ಅವನ ಸ್ವಂತ ಜವಾಬ್ದಾರಿಯ ಮೇಲೆ ಆದೇಶ |
| (C) ಅವಲಂಬನೆ ರಹಿತ ಅನುಮೋದನೆ | (III) C ಗೆ ಮಾತ್ರ ಪಾವತಿಸಿ |
| (D) ಐಚ್ಛಿಕ ಅನುಮೋದನೆ | (IV) C ಗೆ ಪಾವತಿಸಿ ಅಥವಾ ಅವನ ಆಗಮನದ ಬಳಿಕ ಆದೇಶ |

ಸರಿಯಾದ ಉತ್ತರವನ್ನು ಆರಿಸಿರಿ:

| | (A) | (B) | (C) | (D) |
|---|---|---|---|---|
| (1) | (III) | (IV) | (II) | (I) |
| (2) | (II) | (IV) | (I) | (III) |
| (3) | (IV) | (I) | (II) | (III) |
| (4) | (II) | (III) | (IV) | (I) |

6. ಬೇಸೆಲ್ ಬಂಡವಾಳದ ಒಪ್ಪಂದವು ಒಳಗೊಂಡ ಸ್ತಂಭಗಳೆಂದರೆ ____________

(a) ಕನಿಷ್ಠ ಬಂಡವಾಳ

(b) ಸಾಲದ ಅಪಾಯ

(c) ಮೇಲ್ವಿಚಾರಣಾ ವಿಮರ್ಶೆ

(d) ಮಾರುಕಟ್ಟೆ ಶಿಸ್ತು

ಸರಿಯಾದ ಉತ್ತರವನ್ನು ಆರಿಸಿರಿ:

(1) (a), (b), (c)
(2) (a), (c), (d)
(3) (a), (b), (d)
(4) (b), (c), (d)

7. ಸಾಲದ ಮೇಲೆ ಕೊಡಬೇಕಾದ ಬಡ್ಡಿ ಲಾಭದ ವಿರುದ್ಧ ಚಾರ್ಜ್ ಆಗಿ, ಅಂತಿಮವಾಗಿ ಕಂಪನಿಯ ತೆರಿಗೆ ಹೊಣೆಗಾರಿಕೆಯನ್ನು ಕಡಿಮೆ ಮಾಡುತ್ತದೆ. ಈ ವಿದ್ಯಮಾನವನ್ನು ______ ಎಂದು ಕರೆಯಲಾಗುತ್ತದೆ.

(1) ತೆರಿಗೆ ತಪ್ಪಿಸಿಕೊಳ್ಳುವಿಕೆ
(2) ತೆರಿಗೆ ಕಡಿತ
(3) ತೆರಿಗೆ ಗುರಾಣಿ
(4) ತೆರಿಗೆ ಲೋಪ

8. ಹಣಕಾಸು ನಿರ್ವಹಣೆ ಅವುಗಳೆಂದರೆ ಪ್ರಮುಖ ಆರ್ಥಿಕ ಸಂಪನ್ಮೂಲ ಎಂದರೆ, ಬಂಡವಾಳ ನಿಧಿಗಳ ಸಮರ್ಥ ಬಳಕೆಗೆ ಸಂಬಂಧಪಟ್ಟಿದೆ. ಈ ವ್ಯಾಖ್ಯಾನವನ್ನು ನೀಡಿದವರು __________

(1) ಎಜ್ರಾ ಸೊಲೊಮನ್
(2) ಮಿಲ್ಲರ್ ಮತ್ತು ಮೊಡಿಗ್ಲಿಯಾನಿ
(3) ಕೋಲಿನ್ಸ್ ಬ್ರೂಕ್ಸ್
(4) ಆರ್.ಸಿ. ಓಸ್ಬಾರ್ನ್

9. ಶ್ರೀ ಕಿರಣ್ ಒಂದು ಯಂತ್ರವನ್ನು ಖರೀದಿ ವ್ಯವಸ್ಥೆಯ (H.P.P.) ಮೇಲೆ ರೂ. 2,730 ಕ್ಕೆ ನೀಡಿರುತ್ತಾರೆ. ಹಣವು ಈ ಕೆಳಗಿನಂತೆ ಪಾವತಿಸಬೇಕು:

ವಿತರಣೆ ಮಾಡಿದಂದು ರೂ. 800 ಪಾವತಿಸಬೇಕು; ತರುವಾಯ ಮೊದಲನೇ ವರ್ಷ – ರೂ. 760; 2ನೇ ವರ್ಷ – ರೂ. 600; 3ನೇ ವರ್ಷ – ರೂ. 350; 4ನೇ ವರ್ಷ – ರೂ. 220; ಬಡ್ಡಿ ಪ್ರತಿ ವರ್ಷಕ್ಕೆ 10% ರಂತೆ ವಿಧಿಸಲಾಗಿದೆ. ಆದರೆ, ಮೇಲಿನಂತೆ ಸಮಸ್ಯೆಗೆ ಲೆಡ್ಜರ್ ಬರೆಯಲು ಶ್ರೀ ಕಿರಣ್‌ಗೆ ಸ್ವತ್ತಿನ ನಗದು ಬೆಲೆ ಬೇಕಾಗಿದೆ. ನಗದು ಬೆಲೆಯನ್ನು ಖಚಿತಪಡಿಸಿ.

(1) ರೂ. 2,400
(2) ರೂ. 2,730
(3) ರೂ. 2,800
(4) ರೂ. 2,830

10. ಸಮರ್ಥನೆ (ಎ) ಬುಲ್ ಮಾರುಕಟ್ಟೆಯಲ್ಲಿ ಮಾರುಕಟ್ಟೆ ಷೇರು ಬೆಲೆಗಳು ನಿರಂತರ ಏರಿಕೆ ಲಕ್ಷಣಗಳಿಂದ ಕೂಡಿದೆ. ತಾರ್ಕಿಕ (ಆರ್) ದೇಶದ ಆರ್ಥಿಕ ಮಟ್ಟ ಪ್ರಬಲವಾಗಿದೆ ಮತ್ತು ಉದ್ಯೋಗ ಮಟ್ಟಗಳು ಅಧಿಕ.

(1) (ಎ) ಮಾತ್ರ ಸರಿಯಾಗಿದೆ
(2) (ಆರ್) ಮಾತ್ರ ಸರಿಯಾಗಿದೆ
(3) (ಎ) ಮತ್ತು (ಆರ್) ಎರಡೂ ಸರಿಯಾಗಿದೆ ಮತ್ತು (ಆರ್) (ಎ) ಗೆ ಸಂಬಂಧಿಸಿದೆ.
(4) (ಎ) ಮತ್ತು (ಆರ್) ಎರಡೂ ಸರಿಯಾಗಿದೆ ಮತ್ತು (ಆರ್) (ಎ) ಗೆ ಸಂಬಂಧಿಸಿಲ್ಲ.

11. ಶ್ರೀ ವಿಜಯ್ ರೂ. 10,000 ವೇತನ ಪಡೆಯಲು ಅರ್ಹನಾಗಿದ್ದಾನೆ. 2009ರ ಮಾರ್ಚ್ ತಿಂಗಳ ಸಂಬಳದಲ್ಲಿ ರೂ. 20,000ಗಳನ್ನು ಮುಂಗಡವಾಗಿ ತೆಗೆದುಕೊಂಡಿರುತ್ತಾನೆ. ವಾರ್ಷಿಕ ಸಾಲು 2009–10 ರಲ್ಲಿ ಅವರ ಒಟ್ಟು ವೇತನ __________

(1) ರೂ. 1,40,000
(2) ರೂ. 1,20,000
(3) ರೂ. 80,000
(4) ರೂ. 1,00,000

12. 1–1–1996 ರಂದು ABC ಕಂಪೆನಿಯು ಒಂದು ಯಂತ್ರವನ್ನು XYZ Ltd. ನಿಂದ ಬಾಡಿಗೆ ಖರೀದಿ ವ್ಯವಸ್ಥೆ ಮೇಲೆ ಖರೀದಿಸಿತು. ನಗದು ಬೆಲೆ ರೂ. 26,350 ಆಗಿತ್ತು. ಒಡನೆ ರೂ. 10,000 ಗಳನ್ನು ಪಾವತಿಸಬೇಕಾಗಿತ್ತು ಮತ್ತು ಉಳಿದ ಹಣ ರೂ. 6,000 ದಂತೆ ಮೂರು ವಾರ್ಷಿಕ ಕಂತುಗಳಲ್ಲಿ ಕೊಡಬೇಕು. ಬಾಡಿಗೆ ಖರೀದಿ ಬೆಲೆಯನ್ನು ಲೆಕ್ಕಿಸಿ.

(1) ರೂ. 28,000
(2) ರೂ. 36,350
(3) ರೂ. 16,350
(4) ರೂ. 42,350

13. ಲೆಕ್ಕ ಶಾಸ್ತ್ರದಲ್ಲಿ ಒಗ್ಗೂಡುವಿಕೆಯ ಪೂರ್ವದ ಲಾಭವನ್ನು ಈ ರೀತಿ ಪರಿಗಣಿಸಲಾಗುತ್ತದೆ.

(1) ಕಂದಾಯ ಮೀಸಲು
(2) ರಹಸ್ಯ ಮೀಸಲು
(3) ಬಂಡವಾಳ ಮೀಸಲು
(4) ಸಾಮಾನ್ಯ ಮೀಸಲು

14. ರೆಪೋ ಮತ್ತು ಮೀಸಲು ರೆಪೋ ದರಗಳು RBI ನ ಸಾಧನ ಮಾರ್ಗವಾಗಿರುವುದು ಇದಕ್ಕಾಗಿ :

(1) ಸಾಲ ನಿಯಂತ್ರಣ
(2) ಒಪ್ಪಿತ ವ್ಯವಸ್ಥೆಗಳು
(3) ನಾಣ್ಯ ವ್ಯವಸ್ಥೆ ನಿರ್ವಹಣೆ
(4) ದ್ರವ್ಯ ನಿಯಂತ್ರಣ

15. ಅಂಚಿನ ವೆಚ್ಚದಲ್ಲಿ ಕೊಡುಗೆಯು ಇದಕ್ಕೆ ಸಮನಾಗಿರುತ್ತದೆ.

(1) ಮಾರಾಟ – ಸ್ಥಿರವೆಚ್ಚ
(2) ಮಾರಾಟ – ಬದಲಾಗುವ ವೆಚ್ಚ
(3) ಮಾರಾಟ – ಲಾಭ
(4) ಮಾರಾಟ – ಬದಲಾಗುವ ವೆಚ್ಚ + ಸ್ಥಿರ ವೆಚ್ಚ

16. 'X' ನಿಯಮಿತವು ರೂ. 1,00,000 ಷೇರು ಬಂಡವಾಳ ಮತ್ತು ರೂ. 1,60,000 ಮೀಸಲು ಬಂಡವಾಳ ಹೊಂದಿದೆ. 'Y' ನಿಯಮಿತವು 'X' ನಿಯಮಿತದ 75% ರಷ್ಟನ್ನು ಗಳಿಸಿ 2 ವರ್ಷಗಳ ಹಿಂದೆ ಅಷ್ಟೇ ಬಂಡವಾಳ. ಮತ್ತು ರೂ. 1,20,000 ಮೀಸಲು ಬಂಡವಾಳ ಹೊಂದಿರುತ್ತದೆ. ಪ್ರಸ್ತುತ ಹಣಕಾಸಿನ ಪರಿಸ್ಥಿತಿಯ ಹೇಳಿಕೆಯಲ್ಲಿ ಅನಿಯಂತ್ರಿತ ಬಡ್ಡಿಯ ಎಷ್ಟು ಮೊಬಲಗನ್ನು ತೋರಿಸಬೇಕು?

(1) ರೂ. 55,000
(2) ರೂ. 70,000
(3) ರೂ. 65,000
(4) ರೂ. 1,95,000

17. ಪಟ್ಟಿಯ – I ನೇ ಅಂಶವನ್ನು ಪಟ್ಟಿಯ – II ನೇ ಅಂಶದೊಂದಿಗೆ ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| (a) PPF ನಲ್ಲಿ ಠೇವಣಿಯಿಟ್ಟ ಮೊತ್ತ | (I) 80 - 1A |
| (b) ಮೂಲಭೂತ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ತೊಡಗಿಸಿದ್ದರಿಂದ ಬಂದ ಲಾಭ ಮತ್ತು ಆದಾಯ | (II) 80 G |
| (c) ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡುಗೆಗಳು | (III) 80 - 1AB |
| (d) SEZ ಅಭಿವೃದ್ಧಿಯಲ್ಲಿ ತೊಡಗಿದ್ದರಿಂದ ಲಾಭ ಮತ್ತು ಆದಾಯ | (IV) 80 - C |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (IV) | (III) | (II) | (I) |
| (2) | (IV) | (I) | (II) | (III) |
| (3) | (IV) | (I) | (III) | (II) |
| (4) | (II) | (I) | (III) | (IV) |

18. ಈ ಕೆಳಗಿನ ಯಾವ ಹೇಳಿಕೆಯು ಸತ್ಯವಲ್ಲ ?

(1) ನೌಕರನ ಮೋಸವನ್ನು ಪತ್ತೆ ಹಚ್ಚುವುದಕ್ಕಿಂತ ಆಡಳಿತ ಕಾರ್ಯ ನಿರ್ವಹಣೆಯ ಮೋಸವನ್ನು ಪತ್ತೆ ಹಚ್ಚುವುದು ಕಠಿಣವಾಗಿರುತ್ತದೆ.

(2) ಆಂತರಿಕ ನಿಯಂತ್ರಣ ವ್ಯವಸ್ಥೆಯು ನೌಕರರ ಮೋಸ ಮತ್ತು ಆಡಳಿತ ಕಾರ್ಯನಿರ್ವಹಣೆಯ ಮೋಸಗಳು ಘಟಿಸುವ ಸಾಧ್ಯತೆಯನ್ನು ಕಡಿಮೆಗೊಳಿಸುತ್ತದೆ.

(3) ಲೆಕ್ಕ ಪರಿಶೋಧಕರ ಜವಾಬ್ದಾರಿಯು ತಪ್ಪು ಮತ್ತು ಮೋಸಗಳನ್ನು ಪತ್ತೆ ಹಚ್ಚುವಿಕೆ ಮತ್ತು ತಡೆಗಟ್ಟುವಿಕೆಗೆ ಸಮನಾಗಿರುತ್ತದೆ.

(4) ಎಲ್ಲಾ ಹೇಳಿಕೆಗಳು ಸರಿ ಇರುತ್ತದೆ.

19. ಈ ಕೆಳಕಂಡ ಎರಡು ಪಟ್ಟಿಯಲ್ಲಿರುವ ಅಂಶಗಳಲ್ಲಿ, ಪಟ್ಟಿಯ – I ನೇ ಅಂಶಗಳನ್ನು ಪಟ್ಟಿಯ – II ನೇ ಅಂಶಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| (a) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ | (I) NPA |
| (b) EXIM ಬ್ಯಾಂಕ್ | (II) ಸಣ್ಣ ಪ್ರಮಾಣ ಕೈಗಾರಿಕೆಗಳಿಗೆ ಅನುಕೂಲ ಮಾಡುವುದು |
| (c) SIDBI | (III) ಸಾಲ ನಿಯಂತ್ರಣ |
| (d) ಬಂಡವಾಳ ಸಮರ್ಪಕ ಸ್ಥಿತಿ | (IV) ರಫ್ತು / ಆಮದು ಹಣಕಾಸಿನ (ಸಾಲ) ವ್ಯವಸ್ಥೆ |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (I) | (II) | (III) | (IV) |
| (2) | (IV) | (III) | (II) | (I) |
| (3) | (II) | (III) | (IV) | (I) |
| (4) | (III) | (IV) | (II) | (I) |

20. ಒಂದು ಕಂಪನಿಯ ಪುನರ್ ರಚನೆಯು ಹೀಗಿದ್ದಾಗ ಸಂಭವಿಸುತ್ತದೆ:

(i) ಒಂದು ಕಂಪನಿಯ ಕೊರತೆ ಬಂಡವಾಳ ಸ್ಥಿತಿ.

(ii) ಒಂದು ಕಂಪನಿಯ ಅಧಿಕ ನಷ್ಟದ ಪರಿಸ್ಥಿತಿ ಮತ್ತು ಕೈ ಬಿಡುವ ಸ್ಥಿತಿ.

(iii) ಒಂದು ಕಂಪನಿಯ ಅಧಿಕ ಬಂಡವಾಳ ಸ್ಥಿತಿ.

ಮೇಲಿನ ಹೇಳಿಕೆಯಲ್ಲಿ ಯಾವುದು ಸರಿಯಾಗಿದೆ.

(1) (i) ಮತ್ತು (ii) ಮಾತ್ರ

(2) (i) ಮತ್ತು (iii) ಮಾತ್ರ

(3) (ii) ಮತು (iii) ಮಾತ್ರ

(4) ಮೇಲಿನ ಎಲ್ಲವೂ.

21. ಭಾರತದಲ್ಲಿ ಈ ಕೆಳಗಿನ ಯಾವುದು ಲೆಕ್ಕ ಪ್ರಮಾಣ AS-3ಯ ಮಾರ್ಗದರ್ಶನದ ಮೇಲೆ ಸಿದ್ಧವಾಗಿದೆ ?

(1) ಕಂಪನಿಯ ಅಡಾವೆ ಪತ್ರಿಕೆ
(2) ನಿಧಿಗಳ ಹರಿವಿನ ಹೇಳಿಕೆ
(3) ನಗದು ಹರಿವು ಹೇಳಿಕೆ
(4) ಕ್ರೋಢೀಕರಿಸಿದ ಹಣಕಾಸಿನ ಹೇಳಿಕೆ

22. ಮಾಡಿಗ್ಲ್ಯಾನಿ ಮತ್ತು ಮಿಲ್ಲರ್ಸ್ ರ ಸಂಸ್ಥೆಯ ಲಾಭಾಂಶ ನೀತಿಯು ____________

(1) ಸಂಗತ
(2) ಅಸಂಗತ
(3) ಅವಾಸ್ತವಿಕ
(4) ಮೇಲಿನವು ಯಾವುದೂ ಅಲ್ಲ.

23. ಪ್ರತಿಪಾದನೆ (A): ಲೆಕ್ಕಾಚಾರ ಮಾಹಿತಿ ಎಂದರೆ ಒಂದು ವ್ಯವಹಾರ ಸಂಸ್ಥೆಯ ಘಟನೆಗೆ ಮಾತ್ರ ಸಂಬಂಧಿಸಿರುತ್ತದೆ.
ಕಾರಣ (R) : ಲೆಕ್ಕಾಚಾರ ಮಾಹಿತಿಯನ್ನು ಹಣಕಾಸಿನ ಹೇಳಿಕೆಗಳಲ್ಲಿ ಪ್ರದರ್ಶಿಸಲಾಗುತ್ತದೆ.

ಸಂಕೇತಗಳ ಸಹಾಯದಿಂದ ಉತ್ತರಿಸಿ:
(1) (A) ಸರಿ ಆದರೆ, (R) ತಪ್ಪು
(2) (A) ಮತ್ತು (R) ಎರಡೂ ಸರಿ
(3) (A) ತಪ್ಪು ಆದರೆ, (R) ಸರಿ
(4) (A) ಮತ್ತು (R) ಎರಡೂ ತಪ್ಪು

24. ಕೊಟ್ಟಿರುವ ಮನೆಯ ಆಸ್ತಿಯ ನ್ಯಾಯಸಮ್ಮತ ಬಾಡಿಗೆಯು ರೂ. 75,000 ಗಳು ಇದರ ಪೌರಸಭೆಯ ಮೌಲ್ಯ ರೂ. 60,000 ಗಳು, ಪ್ರಮಾಣಿತ ಬಾಡಿಗೆಯು ರೂ. 72,000 ಗಳು ಮತ್ತು ವಾಸ್ತವಿಕ ಬಾಡಿಗೆ ಪಡೆದದ್ದು ರೂ. 63,000 ಗಳು ಮನೆಯ ಆಸ್ತಿಯ ಒಟ್ಟು ವಾರ್ಷಿಕ ಮೌಲ್ಯ ಎಷ್ಟು ?

(1) ರೂ. 60,000
(2) ರೂ. 63,000
(3) ರೂ. 72,000
(4) ರೂ. 75,000

25. ಸಾಮಾನ್ಯ ಷೇರಿನ ಮಾರುಕಟ್ಟೆ ಬೆಲೆಯನ್ನು ಅಂದಾಜಿಸುವ ಕೆಳಗಿನ ರೀತಿಯಲ್ಲಿ ಸೂತ್ರಿಸಿದವರು ಯಾರು ?

$$P = \frac{D + r\,\frac{(E - D)}{Ke}}{Ke} \quad S$$

(1) ಮಾಡಿಗ್ಲ್ಯಾನಿ – ಮಿಲ್ಲರ್
(2) ಮೈರಾನ್ – ಗಾರ್ಡನ್
(3) ಜೇಮ್ಸ್ ಈ ವಾಲ್ಟರ್
(4) ಕ್ಲಾರ್ಕಸನ್ ಮತ್ತು ಇಲಿಯಟ್

26. ಒಂದು ಯೋಗ್ಯ ಲೆಕ್ಕ ಪರಿಶೋಧನೆಯ ವರದಿಯು ಗಂಭೀರವಾದ ವಿಷಯವಾಗಿರುತ್ತದೆ. ಏಕೆಂದರೆ :

(1) ಲೆಕ್ಕ ಪರಿಶೋಧನೆ ವರದಿಯ ವಿದ್ಯಾರ್ಹತೆಯು ಜಮಾ–ಖರ್ಚು (ದ್ವಿನಮೂದು) ಲೆಕ್ಕದ ಹಣಕಾಸಿನ ಹೇಳಿಕೆಗಳನ್ನು ಸರಿಯಾಗಿರುತ್ತದೆ ಎಂದು ಬೆಂಬಲಿಸುತ್ತದೆ.
(2) ಇದು ಹಣಕಾಸಿನ ಹೇಳಿಕೆಯ ವಿಶ್ವಾಸಾರ್ಹತೆಯನ್ನು ಹಾನಿ ಮಾಡುತ್ತದೆ.
(3) ಇದು ಅಗತ್ಯ ಅರ್ಹತೆಯುಳ್ಳ ಲೆಕ್ಕ ಪರಿಶೋಧಕನಿಂದ ಲೆಕ್ಕ ಪರಿಶೋಧನೆ ಆಗಿದೆ ಎಂದು ಭರವಸೆ ನೀಡುತ್ತದೆ.
(4) ವಿದ್ಯಾರ್ಹತೆಯು ಹಣಕಾಸಿನ ಹೇಳಿಕೆಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ.

27. ಬೆಳಕಿನ ವಿವಿಧ ಪ್ರಖರತೆಯು ಕಾರ್ಮಿಕರ ಉತ್ಪಾದಕತೆಯ ಮೇಲೆ ಬೀರುವ ಪರಿಣಾಮವನ್ನು ತೋರಿಸಿಕೊಟ್ಟಿರುವುದನ್ನು ಹೀಗೆ ಕರೆಯಲಾಗುತ್ತದೆ ?

(1) ಸಂಘಟನೆಯ ಸಿದ್ಧಾಂತಗಳು
(2) ಹಾವ್‌ಥಾರ್ನ್ ಅಧ್ಯಯನಗಳು
(3) ವೈಚಾರಿಕ ಯೋಜನೆ
(4) ಅನುಷಂಗಿಕ ಸಿದ್ಧಾಂತಗಳು

28. ಸಿಬ್ಬಂದಿಯೊಬ್ಬರು ಹೊಂದಿರಬಹುದಾದ ಗರಿಷ್ಠ ಮಟ್ಟದ ಅಧಿಕಾರವು :

(1) ಜೊತೆಗೂಡುವ ಅಧಿಕಾರ
(2) ಕ್ರಿಯಾತ್ಮಕ ಅಧಿಕಾರ
(3) ಕಡ್ಡಾಯ ಸಮಾಲೋಚನೆ
(4) ಐಚ್ಛಿಕ ಸಮಾಲೋಚನೆ

29. ಸಂಘಟನಾ ವಿನ್ಯಾಸದಲ್ಲಿ ವೃತ್ತಿಪರ ನೌಕರಶಾಹಿಯನ್ನು ಪರಿಚಯಿಸಿದವರು :

(1) ಪೋರ್ಟರ್ ಮತ್ತು ಲಾಲರ್
(2) ಮೆಕ್ ಗ್ರೇಗರ್
(3) ಹೆನ್ರಿ ಫೇಯೊಲ್
(4) ಮಿಂಟ್ಸ್‌ಬರ್ಗ್

30. ಸಾಂಕೇತಿಕ ಪ್ರತಿಫಲಗಳನ್ನು ಹಂಚುವ ಮತ್ತು ಯುಕ್ತಿಯಿಂದ ನಿಭಾಯಿಸುವ ಅಧಿಕಾರವನ್ನು ಹೀಗೆ ಕರೆಯಲಾಗುತ್ತದೆ.

(1) ದಬ್ಬಾಳಿಕೆ ಅಧಿಕಾರ
(2) ಪ್ರತಿಫಲಾಧಿಕಾರ
(3) ಮನ ಒಲಿಸುವ ಅಧಿಕಾರ
(4) ಜ್ಞಾನಾಧಿಕಾರ

31. ಅಂಗೀಕಾರವನ್ನು ಕೋರುವ, ಎಚ್ಚರಿಕೆಗಳನ್ನು ಪುನರುಚ್ಚರಿಸುವ ಮತ್ತು ಕಡ್ಡಾಯ ನಿಯಮಗಳತ್ತ ಗಮನ ಸೆಳೆಯುವಲ್ಲಿ ಬಲಯುತ ಕಾರ್ಯವೈಖರಿಯನ್ನು ಹೊಂದಿರುವ ಅಧಿಕಾರ ತಂತ್ರವು ________ ಆಗಿದೆ.

(1) ಸಂಯೋಜನ
(2) ಚೌಕಾಶಿ
(3) ಖಚಿತತೆ
(4) ಕುಶಲತೆ

32. ಸಮಸ್ಥಿತಿಯನ್ನು ಅಲುಗಿಸಿ ಹಳೆಯ ನಡವಳಿಕೆಗಳನ್ನು ತ್ಯಜಿಸುವಂತೆ ಪ್ರೇರೇಪಿಸಿ ಯಥಾಸ್ಥಿತಿಯನ್ನು ನಿರ್ವಹಿಸುವುದನ್ನು ಹೀಗೆನ್ನಲಾಗುತ್ತದೆ.

(1) ಕರಗಿಸುವಿಕೆ
(2) ಚಲನಶೀಲ
(3) ಮತ್ತೆ ನೀರ್ಗಲ್ಲಾಗುವಿಕೆ
(4) ಸಾಮಾನ್ಯ ಸ್ಥಿತಿ ಕಾಯುವುದು

33. ಉದ್ಯೋಗಿಗಳು ತಮ್ಮ ಸಂಘರ್ಷ ಮತ್ತು ಟೀಕೆಗಳನ್ನು ಮುಕ್ತವಾಗಿ ಚರ್ಚಿಸಿ ತಿಳಿಗೊಳಿಸುವಲ್ಲಿ ಪ್ರೇರಣೆ ಒದಗಿಸುವ ಮಟ್ಟಕ್ಕೆ ಈ ಹೆಸರು ಇದೆ :

(1) ಐಕ್ಯತೆ
(2) ಅಪಾಯ ಸಹನೆ
(3) ಸಂಘರ್ಷ ಸಹನೆ
(4) ನಿರ್ದೇಶನ

34. ನೌಕರಶಾಹಿ ಮತ್ತು ಊಳಿಗಮಾನ್ಯ ಪದ್ಧತಿಯ ಮೌಲ್ಯವನ್ನು ಪ್ರತಿಬಿಂಬಿಸುವ ಸಂಘಟನಾತ್ಮಕ ಸಂಸ್ಕೃತಿಯನ್ನು ಹೀಗೆ ಕರೆಯಲಾಗುತ್ತದೆ :

(1) ಯಾಂತ್ರಿಕ ಸಂಸ್ಕೃತಿ
(2) ಸಾವಯವ ಸಂಸ್ಕೃತಿ
(3) ಔದ್ಯೋಗಿಕ ಸಂಸ್ಕೃತಿ
(4) ವ್ಯವಹಾರ ಸಂಸ್ಕೃತಿ

35. ‘ ದಿ ಪೋರ್ಸ್ ಫೀಲ್ಡ್ ಥಿಯರಿ ’ ಯನ್ನು ಅಭಿವೃದ್ಧಿಪಡಿಸಿದವರು :

(1) ಕರ್ಟ ಲೆವಿನ್
(2) ಮಾರ್ಚ್ ಮತ್ತು ಸೈಮನ್
(3) ಬ್ಲೇಕ್ ಮತ್ತು ಮೌಟನ್
(4) ಪೀಟರ್ ಡ್ರೂಕರ್

36. ನೌಕರರಲ್ಲಿ ತಮ್ಮ ತಮ್ಮ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಮತ್ತು ಅನ್ಯರು ತಮ್ಮ ಬಗ್ಗೆ ಗ್ರಹಿಸಬಹುದಾದುದನ್ನು ಪರಿಚಯಿಸುವ ಉದ್ದೇಶದಿಂದ ಕೈಕೊಂಡ ತರಬೇತಿಯು ____________ ಆಗಿದೆ.

(1) ಗುರಿ ನಿರ್ಧರಿಸುವಿಕೆ
(2) ನಂಬಿಕೆಯ ನಿರ್ಮಾಣ
(3) ಚೌಕಟ್ಟು (ಗ್ರಿಡ್) ತರಬೇತಿ
(4) ಸಂವೇದನಾಶೀಲತೆಯ ತರಬೇತಿ

37. ಗ್ರಾಫಾಲಜಿ ತಂತ್ರವು ವ್ಯಕ್ತಿಯ ಈ ಸಾಮರ್ಥ್ಯವನ್ನು ವಿಶ್ಲೇಷಿಸುವಲ್ಲಿ ಬಳಸಲಾಗುತ್ತದೆ :

(1) ವರ್ತನೆ
(2) ಕೈಬರಹ
(3) ಸಂಖ್ಯಾ ಸಾಮರ್ಥ್ಯ
(4) ತರ್ಕ ಸಾಮರ್ಥ್ಯ

38. ಸಮತಲ ವಿನ್ಯಾಸದಲ್ಲಿ ಈ ಕೆಳಗಿನವುಗಳಲ್ಲಿ ಯಾವ ಲಕ್ಷಣವು ಕಂಡುಬರುವುದಿಲ್ಲ ?

(1) ಹಂಚಿಕೆಯಾದ ಕಾರ್ಯಚಟುವಟಿಕೆಗಳು
(2) ಕೆಲವೇ ನಿಯಮಗಳು
(3) ಕೆಲವೇ ತಂಡಗಳು
(4) ಮುಖಾ–ಮುಖಿ ಸಂವಹನ

39. ವ್ಯವಸ್ಥಾಪಕರು ನೈಜ ವಸ್ತು ಸ್ಥಿತಿಯ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಮತ್ತು ತೆಗೆದುಕೊಳ್ಳಲಾರರು. ಇದನ್ನು ಹೀಗೆನ್ನಲಾಗುತ್ತದೆ :

(1) ಆತಂಕ ವಿರುದ್ಧ ರಕ್ಷಣೆ
(2) ವಿವೇಚನಾಶೀಲತೆಯ ದಿಗ್ಬಂಧನ
(3) ಬದಲಾವಣೆಗೆ ಸಂವೇದನಾರಹಿತವಾಗಿರುವುದು
(4) ಸಂಘಟನಾತ್ಮಕ ವೈಫಲ್ಯ

40. ಬೇರೆಯವರ ಉಪಸ್ಥಿತಿಯನ್ನು ಗುರುತಿಸುವ ಯಾವುದೇ ಕ್ರಿಯೆಗಳಿಗೆ ಈ ಹೆಸರು ಇದೆ :

(1) ಒತ್ತು ಕೊಡುವುದು
(2) ಸಂಘರ್ಷಿಸುವುದು
(3) ಸಮಚಿತ್ತಗೊಳಿಸುವುದು
(4) ಹೊಂದಾಣಿಕೆ ಮಾಡಿಕೊಳ್ಳುವುದು

41. ನಾಯಕತ್ವದಲ್ಲಿ ' ರಚನೆ ಆರಂಭಿಸುವಿಕೆ ' ಇದನ್ನು ಸೂಚಿಸುತ್ತದೆ :

(1) ಕಾರ್ಯ ದೃಷ್ಟಿಕೋನ
(2) ಪರಿಗಣನೆ
(3) ಜನಪರ ದೃಷ್ಟಿಕೋನ
(4) ಪರವಾನಿಗೆಯ ಶೈಲಿ

42. ನಾಯಕತ್ವ ಶೈಲಿಯ ಮೇಲೆ ಕೈಕೊಳ್ಳಲಾದ ಮಿಚಿಗನ್ ಅಧ್ಯಯನಗಳನ್ನು ನಡೆಸಿದವರು :

(1) ಲೆವಿನ್, ಲಿಪ್ಪಿಟ್ ಮತ್ತು ವೈಟ್
(2) ಸ್ಟಾಗಡಿಲ್
(3) ರೆನ್ಸಿಸ್ ಲಿಕರ್ಟ
(4) ಹೆಂಫಿಲ್

43. ವ್ಯಕ್ತಿ ಅಥವಾ ಒಂದು ಸಮೂಹ, ತಮ್ಮ ತಮ್ಮ ಕಾರ್ಯವೃತ್ತಿ, ಕಂಪನಿ, ಮೇಲ್ವಿಚಾರಕರ ಬಗ್ಗೆ ಹೊಂದಿರಬಹುದಾದ ವರ್ತನೆಗಳು, ತೀರ್ಪುಗಳು ಮತ್ತು ಕೆಲಸದ ಬಗ್ಗೆ ಭಾವನೆಗಳನ್ನು ಸೂಚಿಸುವುದು :

(1) ಪ್ರೇರಣೆ
(2) ನೈತಿಕತೆ
(3) ಸಂತೃಪ್ತಿ
(4) ಮೌಲ್ಯ

44. ಪ್ರೇರೇಪಣೆಯ ನಿರೀಕ್ಷಣಾ ಸಿದ್ಧಾಂತವನ್ನು ಯಾರು ಅಭಿವೃದ್ಧಿಪಡಿಸಿದರು ?

(1) ಗ್ರೆಗರ್
(2) ಗ್ರಿಲ್‌ಬ್ರೆತ್
(3) ವ್ಹಿಕ್ಟರ್‌ವ್ರೂಮ್
(4) ಅಬ್ರಹಾಂ ಮಾಸ್ಲೋ

45. ಶ್ರೇಣಿ ಸಂಘಟನೆಯನ್ನು ಹೀಗೆಂದೂ ಸಹಾ ಕರೆಯುವರು ?

(1) ಸೈನ್ಯದ ಸಂಘಟನೆ
(2) ಕಾರ್ಯಾತ್ಮಕ ಸಂಘಟನೆ
(3) ಸಮಿತಿ ರೂಪದ ಸಂಘಟನೆ
(4) ಮ್ಯಾಟ್ರಿಕ್ಸ್ (ಮಾತೃಕೆ) ಸಂಘಟನೆ

46. ಕಾರ್ಯಾತ್ಮಕ ಸಂಘಟನೆಯಲ್ಲಿ ಎಷ್ಟು ಜನ ಪರಿಣಿತರನ್ನು ಸೂಚಿಸಲಾಗಿದೆ ?

(1) ಎಂಟು
(2) ಆರು
(3) ಒಂಬತ್ತು
(4) ಐದು

47. ಸಂಘಟನೆಯ ನಡವಳಿಕೆಯನ್ನು ತಿಳಿದುಕೊಳ್ಳುವ ಮಾರ್ಗಗಳು ಯಾವುವು ?

(1) ಮಾನವ ಸಂಪನ್ಮೂಲ ಮಾರ್ಗ
(2) ಆನುಷಂಗಿಕ ಮಾರ್ಗ
(3) ಉತ್ಪಾದಕತೆಯ ಮಾರ್ಗ
(4) ಮೇಲಿನ ಎಲ್ಲವೂ

48. ಸಹಾಯಕ ಸಿಬ್ಬಂದಿಯವರು ಆತ್ಮವಿಶ್ವಾಸದಿಂದ ಮತ್ತು ಉತ್ಸಾಹದಿಂದ ಕೆಲಸ ಮಾಡುವಂತೆ ಅವರನ್ನು ಪ್ರೇರೇಪಿಸುವಂತೆ ಮಾಡುವ ವ್ಯವಸ್ಥಾಪಕನ ಸಾಮರ್ಥ್ಯವೇ ______________

(1) ನಾಯಕತ್ವ
(2) ನೈತಿಕ ಸ್ಥೈರ್ಯ
(3) ಪ್ರೇರೇಪಣೆ
(4) ಯೋಜಿಸುವಿಕೆ

49. P.E.R.T ಅನ್ನು ವಿಸ್ತರಿಸಿ.

(1) ಉತ್ಪನ್ನ ಮೌಲ್ಯಮಾಪನ ಮತ್ತು ಸಮೀಕ್ಷೆಯ ತಂತ್ರ
(2) ಕಾರ್ಯಕ್ರಮ ಪರೀಕ್ಷಿಸುವ ಮತ್ತು ಸಮೀಕ್ಷೆಯ ತಂತ್ರ
(3) ಕಾರ್ಯಕ್ರಮ ಮೌಲ್ಯಮಾಪನ ಮತ್ತು ಸಮೀಕ್ಷೆಯ ತಂತ್ರ
(4) ಫಲಭರಿತ ಮೌಲ್ಯಮಾಪನ ಮತ್ತು ಸಮೀಕ್ಷೆಯ ತಂತ್ರ

50. __________ ದ ಪ್ರಕಾರ ಜನರು ತಮ್ಮನ್ನು ಸರಿಸಮಾನವಾಗಿ ಕಾಣಬೇಕೆಂಬ ನಂಬಿಕೆಯಾಗಿರುತ್ತದೆ.

(1) ಸಮಾನತಾ ಸಿದ್ಧಾಂತ
(2) ನಿರೀಕ್ಷಣೆಯ ಸಿದ್ಧಾಂತ
(3) X' ಮತ್ತು 'Y' ಸಿದ್ಧಾಂತ
(4) 'Z' ಸಿದ್ಧಾಂತ

51. __________ಅಂದರೆ, ತಾವೆಲ್ಲರೂ ಒಂದೇ ಎಂಬ ಭಾವನೆ.

(1) ಪ್ರೇರೇಪಣೆ
(2) ನೈತಿಕ ಸ್ಥೈರ್ಯ
(3) ಗುರಿ ನಿಗದಿಪಡಿಸುವಿಕೆ
(4) ಸಂಘಟನೆ

52. ನಿರಂಕುಶ, ಪ್ರಜಾಪ್ರಭುತ್ವ ಮತ್ತು ಸ್ವತಂತ್ರ ಶೈಲಿಗಳ ನಾಯಕತ್ವವನ್ನು ಯಾರು ಪ್ರತಿಪಾದಿಸಿದರು ?

(1) ಕುರ್ತ್‌ಲೇವಿನ್
(2) ರಾಬರ್ಟ್ ಹೌಸ್
(3) ಫೀಡ್ಲರ್ಸ್
(4) ಹೆರ್ಸಿ–ಬ್ಲಾನ್‌ಚಾರ್ಡ್

53. ಮೊದಲಬಾರಿಗೆ ಪಿ.ಇ.ಆರ್.ಟಿ.ಯನ್ನು ಅಭಿವೃದ್ಧಿಪಡಿಸಿ ಯಾವ ನಿರ್ದಿಷ್ಟ ಯೋಜನೆಯಲ್ಲಿ ಬಳಸಲಾಯಿತು ?

(1) ಭಾರತೀಯ ಕ್ಷಿಪಣಿ ಉಡಾವಣಾ ಕಾರ್ಯದಲ್ಲಿ
(2) ಅಮೇರಿಕಾದಲ್ಲಿ ಪೊಲಾರಿಸ್ ಬ್ಯಾಲಸ್ಟಿಕ್ ಕ್ಷಿಪಣಿಗಳ ಯೋಜನೆಯಲ್ಲಿ
(3) ಜಪಾನ್‌ನ ರಾಕೆಟ್ ಉಡಾವಣಾ ಯೋಜನಾ ಕಾರ್ಯದಲ್ಲಿ
(4) ಶ್ರೀಲಂಕಾದ ಕ್ಷಿಪಣಿ ಉಡಾವಣಾ ಯೋಜನಾ ಕಾರ್ಯದಲ್ಲಿ

54. ಒಬ್ಬ ವ್ಯಕ್ತಿಯು ವಸ್ತುಗಳು ಅಥವಾ ಸಂದರ್ಭಗಳನ್ನು ಇತರೆ ವ್ಯಕ್ತಿಗಳ ದೃಷ್ಟಿಯಿಂದ ಗಮನಿಸಿ ಅರ್ಥೈಸುವ ಸಾಮರ್ಥ್ಯವನ್ನು __________ ಎಂದು ಕರೆಯುವರು.

(1) ತನ್ಮಯನಾಗುವಿಕೆ (ಅನುಭೂತಿ ಶಕ್ತಿ)
(2) ನೇಮಕಾತಿ
(3) ಪ್ರೇರೇಪಣೆ
(4) ನೈತಿಕ ಸ್ಥೈರ್ಯ

55. ಅಧಿಕ ಸಾಮರ್ಥ್ಯವು ಈ ಕೆಳಗಿನ ಯಾವುದರಡಿ ಕಾಣುವುದಿಲ್ಲ.

(1) ಸ್ವಾಮ್ಯಯುತ ಪೈಪೋಟಿ
(2) ಪರಿಪೂರ್ಣ ಪೈಪೋಟಿ
(3) ಏಕಸ್ವಾಮ್ಯ
(4) ಕೆಲಜನ ಸ್ವಾಮ್ಯ

56. ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| (a) ಆಲ್ಡೆರ್‌ಫರ್ | (I) ಕೆಲಸದ ಪುಷ್ಟೀಕರಣ |
| (b) ಮಾಸ್‌ಲೋ | (II) ಕೆಲಸ ವಿಸ್ತಾರಗೊಳಿಸುವುದು |
| (c) ಹರ್ಜ್‌ಬರ್ಗ್ | (III) 'X' ಸಿದ್ಧಾಂತ ಮತ್ತು 'Y' ಸಿದ್ಧಾಂತ |
| (d) ಮೆಕ್ ಗ್ರೆಗರ್ | (IV) ERG ಸಿದ್ಧಾಂತ |
| | (V) ಅಗತ್ಯತೆಗಳ ಕ್ರಮಾಗತ ವ್ಯವಸ್ಥೆ |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (II) | (III) | (I) | (IV) |
| (2) | (IV) | (V) | (I) | (III) |
| (3) | (III) | (II) | (IV) | (V) |
| (4) | (IV) | (V) | (I) | (III) |

57. ಸಮರ್ಥನೆ (A) : ಖಜಾನೆ ವ್ಯವಸ್ಥಾಪಕನು ಕರಾರು ಪತ್ರದ ಮಾರುಕಟ್ಟೆಯಲ್ಲಿಯೂ, ಫೋರೆಕ್ಸ್ ಮಾರುಕಟ್ಟೆಯಂತೆ ಉತ್ಪನ್ನಗಳನ್ನು ಉಪಯೋಗಿಸುವುದು.

ತಾರ್ಕಿಕ (R) : ಅಪಾಯ ನಿರ್ವಹಣೆಯಲ್ಲಿ ಸಹಾಯ ಮಾಡುತ್ತದೆ.

ಸಂಕೇತಗಳು :

(1) (A) ಮತ್ತು (R) ಎರಡೂ ತಪ್ಪು
(2) (A) ಮತ್ತು (R) ಎರಡೂ ಸರಿ
(3) (A) ಸರಿ, ಆದರೆ (R) ತಪ್ಪು
(4) (R) ಸರಿ, ಆದರೆ (A) ತಪ್ಪು

58. ಉತ್ಪನ್ನ ಜೀವ ಚಕ್ರದ ಯಾವ ಹಂತದಲ್ಲಿ ಬೆಲೆ ನಿರ್ಧರಿಸುವಿಕೆಯು ಸಂಕೀರ್ಣವಾಗಿರುತ್ತದೆ ?

(1) ಅವಸಾನದ ಹಂತ
(2) ಬೆಳವಣಿಗೆ ಹಂತ
(3) ಪ್ರಾರಂಭಿಕ ಹಂತ
(4) ಪರಿಪಕ್ವತೆ ಹಂತ

59. “ ವ್ಯವಹಾರಿಕ ನ್ಯಾಯ ” ವು ಇದಕ್ಕೆ ಸಂಬಂಧಿಸಿದೆ :

(1) ಅತ್ಯುತ್ತಮ ಬಂಡವಾಳ ವಿನ್ಯಾಸ
(2) ಸಮರ್ಪಕ ಬಂಡವಾಳೀಕರಣ
(3) ಬಂಡವಾಳ ಸಲಕರಣೆ
(4) ದ್ರವ್ಯ (watered) ಬಂಡವಾಳ

60. ಈ ಕೆಳಗಿನವುಗಳಲ್ಲಿ ಯಾವುದು ಆರ್ಥಿಕ ವ್ಯವಸ್ಥೆಯ ಅಂಶ ಅಲ್ಲ ?

(1) ಜನಸಾಮಾನ್ಯರು
(2) ಸಂಪನ್ಮೂಲ
(3) ಬಹುಮಾನ
(4) ಈ ಯಾವುದೂ ಅಲ್ಲ

61. GAAR ಇದಕ್ಕೆ ಸಂಬಂಧಿಸಿದೆ :

(1) ತೆರಿಗೆ
(2) ರಕ್ಷಣೆ
(3) ಉತ್ಪನ್ನ
(4) ಬ್ಯಾಂಕಿಂಗ್

62. ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| (a) ಉತ್ಪನ್ನ | (I) ಸಂರಕ್ಷಣೆ |
| (b) ಅಭಿವೃದ್ಧಿ (ಮುಂಬಡ್ತಿ) | (II) ಲಾಭದ ಅಂಚು |
| (c) ಬೆಲೆ | (III) ಸಂವಹನ |
| (d) ಗಂಟುಕಟ್ಟು (ಪ್ಯಾಕೇಜಿಂಗ್) | (IV) ಮೌಲ್ಯ |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (IV) | (III) | (II) | (I) |
| (2) | (II) | (III) | (IV) | (I) |
| (3) | (III) | (I) | (II) | (IV) |
| (4) | (II) | (IV) | (I) | (III) |

63. ನೆಗೆತ ಬೆಲೆಯು ಯಾವುದಕ್ಕೆ ಉಪಯೋಗವಾಗುತ್ತದೆ ?

(1) ಭೋಗ ಸರಕುಗಳು
(2) ಅನುಭೋಗಿ ಸರಕುಗಳು
(3) ಅಗತ್ಯತೆ ಸರಕುಗಳು
(4) ಕೈಗಾರಿಕಾ ಸರಕುಗಳು

64. ವ್ಯವಹರಿಸಬಹುದಾದ ಆದಾಯ ಏನನ್ನು ತಿಳಿಸುತ್ತದೆ ?

(1) ವೈಯಕ್ತಿಕ ಆದಾಯ – ವೈಯಕ್ತಿಕ ತೆರಿಗೆಗಳು
(2) ನಿವ್ವಳ ರಾಷ್ಟ್ರೀಯ ಆದಾಯ – ಉಳಿತಾಯಗಳು
(3) ವೈಯಕ್ತಿಕ ಆದಾಯ – ಪಾವತಿಗಳು
(4) ವೈಯಕ್ತಿಕ ಆದಾಯ – ಪರೋಕ್ಷ ತೆರಿಗೆಗಳು

65. ರೇಖೆಗೆ ಸಂಬಂಧಿಸಿದ ಅನುಕೂಲಕರವಾದ ವಿಧಾನದಲ್ಲಿ ಉತ್ತಮಿಕೆಯ ಪರೀಕ್ಷೆಗಾಗಿ $\Delta j$ ಯನ್ನು ಮೌಲ್ಯೀಕರಿಸುವ ಸೂತ್ರ ____________

(1) $Zj - Cj$
(2) $Cj - Zj$
(3) $Cj - bi$
(4) $Zj - bi$

66. ಈ ಕೆಳಗಿನವುಗಳಲ್ಲಿ ಯಾವುದು ನಾಯಕತ್ವದ " ಶಾಸ್ತ್ರೀಯ ಸಿದ್ಧಾಂತ " ?

(1) ವರ್ತನೆಯ ಸಿದ್ಧಾಂತ
(2) ಲಕ್ಷಣ ಸಿದ್ಧಾಂತ
(3) ವ್ಯವಸ್ಥೆಯ ಸಿದ್ಧಾಂತ
(4) ಸ್ವೀಕಾರ ಸಿದ್ಧಾಂತ

67. ವ್ಯವಸ್ಥಾಪನಾ ಚೌಕಟ್ಟನ್ನು ಅಭಿವೃದ್ಧಿಪಡಿಸಿದವರು ಯಾರು ?

(1) ರಾಬರ್ಟ್ ಬ್ಲೇಕ್ ಮತ್ತು ಜೇನ್ ಮೌಟನ್
(2) ರಾಬರ್ಟ್ ಬ್ಲೇಕ್ ಮತ್ತು ಜಾನ್ ಮೌಟನ್
(3) ರೆನ್ಸಿಸ್ ಲಿಕರ್ಟ್ ಮತ್ತು ರಾಬರ್ಟ್ ಬ್ಲೇಕ್
(4) ಜೇನ್ ಮೌಟನ್ ಮತ್ತು ರೆನ್ಸಿಸ್ ಲಿಕರ್ಟ್

68. ನಿಯೋಗದ ಮೂರು ಅಂಶಗಳು :

(1) ಅಧಿಕಾರ, ಜವಾಬ್ದಾರಿ ಮತ್ತು ತೀರ್ಮಾನ ತೆಗೆದುಕೊಳ್ಳುವಿಕೆ
(2) ಅಧಿಕಾರ, ಜವಾಬ್ದಾರಿ ಮತ್ತು ನಿಯಂತ್ರಿಸುವಿಕೆ
(3) ಅಧಿಕಾರ, ಜವಾಬ್ದಾರಿ ಮತ್ತು ನಿರ್ದೇಶನ
(4) ಅಧಿಕಾರ, ಜವಾಬ್ದಾರಿ ಮತ್ತು ಹೊಣೆಗಾರಿಕೆ

69. " ತಂತ್ರ ಮಿದುಳುದಾಳಿ " ತಂತ್ರವನ್ನು ಅಭಿವೃದ್ಧಿಪಡಿಸಿದವರು ಯಾರು ?

(1) ಅಲೆಕ್ಸ್ ಎಫ್ ಓಸ್‌ಬಾರ್ನ್
(2) ಕೂರ್ಟ್ಜ್ ಮತ್ತು ಒ'ಡಾನೆಲ್
(3) ವಿಲಿಯಂ ಎಫ್ ಗ್ಲೂಯಿಕ್
(4) ಇ. ಎಫ್. ಎಲ್. ಬ್ರೆಕ್

70. ಕೆಳಗಿನವುಗಳಲ್ಲಿ ಸರಿಯಾದುದು ಯಾವುದು ?

(1) ಆರ್ಥಿಕ ವೆಚ್ಚಗಳು = ಲೆಕ್ಕಪತ್ರ ವೆಚ್ಚ + ಸ್ಪಷ್ಟ ವೆಚ್ಚ
(2) ಆರ್ಥಿಕ ವೆಚ್ಚಗಳು = ಲೆಕ್ಕಪತ್ರ ವೆಚ್ಚ + ಸೂಚ್ಯ ವೆಚ್ಚ
(3) ಆರ್ಥಿಕ ವೆಚ್ಚಗಳು = ಲೆಕ್ಕಪತ್ರ ವೆಚ್ಚ + ಸ್ಪಷ್ಟ ವೆಚ್ಚ + ಸೂಚ್ಯ ವೆಚ್ಚ
(4) ಆರ್ಥಿಕ ವೆಚ್ಚಗಳು = ಲೆಕ್ಕಪತ್ರ ವೆಚ್ಚ + ಸೂಚ್ಯ ವೆಚ್ಚ + ಅಂಚಿನ ವೆಚ್ಚ

71. ಒಂದು ಯೋಜನೆಯ ವೆಚ್ಚ ರೂ. 20,00,000 ಮತ್ತು ಸವಕಳಿಯ ನಂತರ 12½ %. ಆದರೆ ತೆರಿಗೆಗಿಂತ ಮುನ್ನ 50%ರಂತೆ ಇದ್ದಾಗ, ವಾರ್ಷಿಕ ಆದಾಯ ಲಾಭವು ರೂ. 3,00,000 ಆಗಿದೆ. ಆಗ ಅದರ ಮರುಪಾವತಿಯ ಅವಧಿ ಎಷ್ಟು ?

(1) 6 ವರ್ಷಗಳು
(2) 5 ವರ್ಷಗಳು
(3) 3 ವರ್ಷಗಳು
(4) 4 ವರ್ಷಗಳು

72. ಬೇರೊಂದು ಸರಕಿನ ಮಾರುಕಟ್ಟೆ ಬೆಲೆ ಬದಲಾವಣೆಯಾದಾಗ ಸರಕಿನ ಬೇಡಿಕೆ ಪ್ರಮಾಣವನ್ನು ಅಳೆಯುವ ಪ್ರತಿಕ್ರಿಯೆಯ ಪರಿಕಲ್ಪನೆಯನ್ನು ಏನೆಂದು ಕರೆಯಲಾಗುತ್ತದೆ ?

(1) ಬೇಡಿಕೆಯ ಸ್ಥಿತಿಸ್ಥಾಪಕತ್ವದ ಬೆಲೆ
(2) ಬೇಡಿಕೆಯ ಆದಾಯ ಸ್ಥಿತಿಸ್ಥಾಪಕತ್ವ
(3) ಬೇಡಿಕೆಯ ಅಡ್ಡ ಸ್ಥಿತಿಸ್ಥಾಪಕತ್ವ
(4) ಮೇಲಿನ ಯಾವುದೂ ಅಲ್ಲ.

73. ಸರಾಸರಿ – ಬಹುಲಾಂಕ = 3 (ಸರಾಸರಿ – ಮಧ್ಯಾಂಕ) ಇದರ ಸಂಬಂಧವನ್ನು ವ್ಯಕ್ತಪಡಿಸಿದವರು ಯಾರು?

(1) ಕ್ರಾಕ್ಸ್‌ಟನ್ ಮತ್ತು ಕೌಡನ್
(2) ಪ್ರೊ. ಎ. ಎಲ್. ಬೌಲೆ
(3) ಹೊರೇಸ್ ಸೆಕ್ರಿಸ್ಟ್
(4) ಕಾರ್ಲ್ ಪಿಯರ್‌ಸನ್

74. " ಸಹ ಸಂಬಂಧ ಗುಣಾಂಕ " ಯಾವಾಗಲೂ ಹೀಗೆ ಇರುತ್ತದೆ :

(1) ಒಂದಕ್ಕಿಂತ ಹೆಚ್ಚು
(2) – 1 ಮತ್ತು + 1 ರ ನಡುವೆ
(3) – 1 ಕ್ಕಿಂತಲೂ ಕಡಿಮೆ
(4) 0 ಕ್ಕಿಂತಲೂ ಹೆಚ್ಚು

75. ಅಂಕಿ ಅಂಶಗಳ ಪರಿಕಲ್ಪನೆಯಲ್ಲಿ ಮೊಟ್ಟಮೊದಲಿಗೆ ಹಿಂಚಲನೆ ಎಂಬುವ ಪದವನ್ನು ಬಳಸಿದವರು ಯಾರು ?

(1) ಫ್ರಾನ್ಸಿಸ್ ಗಾಲ್‌ಟನ್
(2) ಪ್ರೊ. ಎ. ಎಲ್. ಬೌಲೆ
(3) ಮುರ್ರೆ . ಆರ್. ಸ್ಪೀಗೆಲ್
(4) ಮೊರೀಸ್ ಹ್ಯಾಮ್‌ಸಂಗ್

76. ಸಂಸ್ಥೆಯ ಪರಿಸರದ ಮೇಲೆ ಈ ಕೆಳಗಿನ ಯಾವ ಅಂಶವು ಪರಿಣಾಮವನ್ನು ಬೀರುವುದಿಲ್ಲ ?

(1) ಗ್ರಾಹಕರು
(2) ಸ್ಪರ್ಧೆ
(3) ಕ್ಲಿಷ್ಟಕರ (ಸಂಕೀರ್ಣತೆ)
(4) ಬದಲಾವಣೆಗಳು

77. ಗುರಿ ನಿರ್ಣಯ ಸಿದ್ಧಾಂತದ ಪ್ರಕಾರ __________ ಮತ್ತು __________ ಗುರಿಗಳಿಂದ ಉತ್ತಮ ಕಾರ್ಯಕ್ಷಮತೆ.

(1) ಸುಲಭ ಮತ್ತು ಸಾಧಿಸಬಹುದಾದ
(2) ಕಷ್ಟ ಮತ್ತು ಕ್ಲಿಷ್ಟಕರ (ಸಂಕೀರ್ಣ)
(3) ನಿರ್ದಿಷ್ಟ ಮತ್ತು ಕಷ್ಟ
(4) ವಿವೇಚನೆ ಮತ್ತು ಗಾತ್ರಾಧಾರಿತ

78. __________ ಇದು, ಗುಂಪು ಪರಿಕಲ್ಪನೆಯಲ್ಲಿ ಗುಂಪು ವಿಸ್ತರಣೆಯಾದಾಗ ಸದಸ್ಯರ ವೈಯಕ್ತಿಕ ಪ್ರಯತ್ನ ಮತ್ತು ಗುಂಪು ಕೊಡುಗೆಯನ್ನು ಕನಿಷ್ಟಗೊಳಿಸುವುದು.

(1) ಗುಂಪು ಸಂಘಟನೆ
(2) ಗುಂಪು ಆಲೋಚನೆ
(3) ಗುಂಪು ಪ್ರಬುದ್ಧತೆ
(4) ಫ್ರೀ ರೈಡರ್ (ಮುಕ್ತಚಲನೆ) ಪ್ರವೃತ್ತಿ

79. ಆಂತರಿಕ ಹಣಕಾಸು ವೆಚ್ಚವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ :

(a) ಉದ್ಯಮಿಯು ತಾನೇ ನಿರ್ವಹಿಸಬಹುದಾದ ಕೆಲಸದ ಸಂಭಾವನೆ
(b) ಉದ್ಯಮಿಗೆ ಸೇರಿದ ಭೂಮಿ ಮತ್ತು ಕಟ್ಟಡದ ಬಾಡಿಗೆಯನ್ನು ಉತ್ಪಾದನೆಯಲ್ಲಿ ಬಳಸುವುದು.
(c) ಉದ್ಯಮಿಯ ಸ್ವಂತ ಬಂಡವಾಳಕ್ಕೆ ನೀಡುವ ಬಡ್ಡಿ
(d) ಆಸ್ತಿಗಳ ಮೇಲಿನ ಸವಕಳಿ

ಸರಿಯಾದ ಉತ್ತರವನ್ನು ಆರಿಸಿರಿ:
(1) (a)
(2) (a) ಮತ್ತು (c)
(3) (a) ಮತ್ತು (b)
(4) ಮೇಲಿನ ಎಲ್ಲವುಗಳೂ

80. ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?

(a) ಬದಲಾಗುವ ವೆಚ್ಚಗಳು ಉತ್ಪಾದನೆ ಗಾತ್ರದ ಜೊತೆ ಬದಲಾಗುತ್ತವೆ.
(b) ಸ್ಥಿರ ವೆಚ್ಚಗಳು ಉತ್ಪಾದನೆ ಗಾತ್ರದ ಜೊತೆ ಬದಲಾಗುವುದಿಲ್ಲ.
(c) ಬದಲಾಗುವ ವೆಚ್ಚಗಳು ಹಾಗೂ ಸ್ಥಿರ ವೆಚ್ಚಗಳು ಪ್ರತಿ ಯೂನಿಟ್‌ಗೆ ಬದಲಾಗುತ್ತವೆ.
(d) ಪ್ರತಿ ಯೂನಿಟ್‌ಗೆ ಸ್ಥಿರ ವೆಚ್ಚಗಳು ಮಾತ್ರ ಬದಲಾಗುವುದಿಲ್ಲ.

ಸರಿಯಾದ ಉತ್ತರವನ್ನು ಆರಿಸಿರಿ:
(1) (a) ಮತ್ತು (b)
(2) (a) ಮತ್ತು (c)
(3) (a), (b) ಮತ್ತು (d)
(4) (b), (c) ಮತ್ತು (d)

81. ಗ್ರಹಿಕೆಯ ಅಸ್ಪಷ್ಟತೆಯನ್ನು (ವಿರೂಪಗೊಳಿಸುವಿಕೆ) ನಾವು ಏನೆಂದು ಅರ್ಥೈಸುತ್ತೇವೆ ?

(1) ಗ್ರಹಿಕೆಯಲ್ಲಿನ ತಿದ್ದುಪಡಿ
(2) ಗ್ರಹಿಕೆಯಲ್ಲಿನ ದೋಷಗಳು
(3) ಗ್ರಹಿಕೆಯಲ್ಲಿನ ಸುಧಾರಣೆ
(4) ಗ್ರಹಿಕೆಯನ್ನು ತಿರಸ್ಕರಿಸುವುದು

82. ಮಾರುಕಟ್ಟೆಯ ಇತಿಹಾಸದಲ್ಲೇ ಯಾವಾಗ ಉತ್ಪನ್ನದ ಅವಧಿ ಕೊನೆಗೊಳ್ಳುತ್ತದೆ ?

(1) 1800 ಉತ್ತರದ (ನಂತರದ) ಅವಧಿ
(2) 1900 ರ ಆರಂಭದಲ್ಲಿ
(3) 1920 ರಲ್ಲಿ
(4) ಎರಡನೇ ಮಹಾಯುದ್ಧ ಮುಗಿದ ನಂತರ

83. ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| (a) ಕೆಲಸ (ಜಾಬ್) ಸರದಿ | (I) ಪ್ರಸ್ತುತ ಸಮಸ್ಯೆ ಮತ್ತು ಭವಿಷ್ಯದ ಸವಾಲುಗಳನ್ನು ವಿಶ್ಲೇಷಿಸುವುದಕ್ಕೆ ತರಬೇತಿ ಮತ್ತು ಅಭಿವೃದ್ಧಿ ಮೂಲಕ ಭರಿಸಲಾಗುವ ಪ್ರಕ್ರಿಯೆ. |
| (b) ಅಗತ್ಯಗಳ ಮೌಲ್ಯ ನಿರ್ಧರಣೆ | (II) ಕೌಶಲ್ಯ ಜ್ಞಾನ ಮತ್ತು ಸಾಮರ್ಥ್ಯವನ್ನು ವಿಸ್ತರಿಸಲು ಸಂಸ್ಥೆಯಲ್ಲಿ ನೌಕರರನ್ನು ವಿವಿಧ ಸ್ಥಾನಗಳಿಗೆ ಸ್ಥಾನೀಕರಿಸುವುದು. (ಚಲಿಸುವಂತೆ ಮಾಡುವುದು) |
| (c) ವೃತ್ತಿ ಸೂಚನೆಗಳ ತರಬೇತಿ | (III) ತಂತ್ರಜ್ಞಾನರಹಿತ ಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ನೀಡುವ ವೃತ್ತಿ ಸೂಚನೆಗಳೊಳಗೊಂಡ ವಿಶಾಲವಾದ ದೀರ್ಘಕಾಲಿಕ ಶೈಕ್ಷಣಿಕ ಕಾರ್ಯಕ್ರಮ. |
| (d) ಅಭಿವೃದ್ಧಿ | (IV) ಒಬ್ಬ ನುರಿತ ಸಂಪನ್ಮೂಲ ವ್ಯಕ್ತಿಯಿಂದ ತರಬೇತಿಯಲ್ಲಿರುವವರಿಗೆ ನಿಶ್ಚಿತವಾದ ಕೆಲಸದಲ್ಲಿ ಚುರುಕು ಬುದ್ಧಿಯ ವ್ಯಕ್ತಿಯಾಗುವಂತೆ ಸೂಚನೆಗಳನ್ನು ಕೊಡುವ ಒಂದು ವ್ಯವಸ್ಥಿತವಾದ ಯೋಜನೆ. |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (II) | (I) | (IV) | (III) |
| (2) | (I) | (II) | (III) | (IV) |
| (3) | (II) | (IV) | (I) | (III) |
| (4) | (IV) | (III) | (I) | (II) |

84. ಒಂದು ದಾಸ್ತಾನು ಕೊಳ್ಳುವ ಆದೇಶದ ವೆಚ್ಚ ರೂ. 400/– ಜೊತೆಗೆ ವಾರ್ಷಿಕ ಪಾಲನೆಯ ವೆಚ್ಚ (annual caring cost) ರೂ. 10/– (ಒಂದು ಯುನಿಟ್‌ಗೆ) ವಾರ್ಷಿಕ ಬೇಡಿಕೆ 2000 ಯುನಿಟ್‌ಗಳಾಗಿದ್ದಲ್ಲಿ ವಾರ್ಷಿಕ ಆರ್ಥಿಕ ಆದೇಶ ಪ್ರಮಾಣ (EOQ) ಎಷ್ಟು ?

(1) 400 ಯೂನಿಟ್‌ಗಳು
(2) 440 ಯೂನಿಟ್‌ಗಳು
(3) 480 ಯೂನಿಟ್‌ಗಳು
(4) 500 ಯೂನಿಟ್‌ಗಳು

85. PERT / CPM ಜಾಲದಲ್ಲಿ ಬೇಕಾದ ವಿಮರ್ಶಾತ್ಮಕ ಪಥದ ಲೆಕ್ಕ ಮಾಡುವಿಕೆಯಲ್ಲಿ ಅಗತ್ಯವಾದುದು:

(1) ಯೋಜನೆಯ ಒಟ್ಟು ಅವಧಿಯನ್ನು ನಿರ್ಧರಿಸುವುದು.
(2) ಒಂದು ಚಟುವಟಿಕೆಗೆ ಆರಂಭಿಕ ಮುಕ್ತಾಯ ಸಮಯವನ್ನು ಅತ್ಯಾರಂಭಿಕ ಸಮಯವನ್ನಾಗಿ ಮುಂದಿನ ಚಟುವಟಿಕೆಗೆ ನಿಯೋಜಿಸುವುದು.
(3) ಹೊಸಮುಕ್ತಾಯ ಸಮಯವನ್ನು ವಿಳಂಬವಲ್ಲದ ನಿರೀಕ್ಷೆಗೂ ಮೀರಿದ ಒಟ್ಟಾರೆ ಯೋಜನೆಯನ್ನು ಒಂದು ಚಟುವಟಿಕೆಗೆ ನಿಗದಿಪಡಿಸುವುದು.
(4) ಅತ್ಯಾಧುನಿಕ ಮತ್ತು ಸಂಕೀರ್ಣ ಕಂಪ್ಯೂಟರ್ ಕಾರ್ಯಕ್ರಮ.

86. ಆದರ್ಶ ಉದ್ದಿಮೆಯೊಂದರ ಮಾರಾಟ 8,43,800, ಅದರ ವೆಚ್ಚ ರೂ. 6,09,900, ಸಂಸ್ಥೆಯ ಲಾಭಾಂಶ ಪಾವತಿ ರೂ. 18,000, ಬಡ್ಡಿ ಪಾವತಿ ರೂ. 38,200/– ಅದರ ಹೆಚ್ಚುವರಿ ಹಿಡಿದಿಟ್ಟ ಗಳಿಕೆ ರೂ. 62,138 ಮತ್ತು ಸಂಸ್ಥೆಯ ಆಸ್ತಿಗಳ ಸವಕಳಿ ರೂ. 76,400 ಆಗಿದ್ದರೆ ಸಂಸ್ಥೆಯ ಸರಾಸರಿ ತೆರಿಗೆ ದರವೆಷ್ಟು ?

(1) 33.33%
(2) 32.83%
(3) 38.12%
(4) ಮೇಲಿನ ಯಾವುದೂ ಅಲ್ಲ

87. ಹೊಂದಿಸಿ ಬರೆಯಿರಿ.

| ಪಟ್ಟಿ – I | ಪಟ್ಟಿ – II |
|---|---|
| (a) ಠೇವಣಿ ಪ್ರಮಾಣ ಪತ್ರ | (I) 91 ದಿನಗಳು, 182 ದಿನಗಳು, ಮತ್ತು 346 ದಿನಗಳು |
| (b) ಡಿಬೆಂಚರ್ಸ್ | (II) 3 ರಿಂದ 5 ತಿಂಗಳುಗಳು |
| (c) ಖಜಾನೆ ಬಿಲ್‌ಗಳು | (III) 1 ರಿಂದ 270 ದಿನಗಳು |
| (d) ವಾಣಿಜ್ಯ ಪತ್ರಗಳು | (IV) ದೀರ್ಘ ವಾರ್ಷಿಕ ಕಾಲಾವಧಿ |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (II) | (IV) | (III) | (I) |
| (2) | (II) | (III) | (IV) | (I) |
| (3) | (IV) | (III) | (I) | (II) |
| (4) | (III) | (IV) | (II) | (I) |

88. ಹೊಂದಿಸಿ ಬರೆಯಿರಿ.

| ಪಟ್ಟಿ – I (ಮ್ಯೂಚುಯಲ್ ಫಂಡ್ ಯೋಜನೆಗಳು) | ಪಟ್ಟಿ – II (ಗುಣಲಕ್ಷಣಗಳು) |
|---|---|
| (a) ತೆರೆದ ಮುಕ್ತಾಯದ ಮ್ಯೂಚುಯಲ್ ಫಂಡ್ ಯೋಜನೆ | (I) ಇದು ಬಂಡವಾಳ ವೃದ್ಧಿ ಆಧಾರಿತ ಹೂಡಿಕೆಯಾಗಿದೆ |
| (b) ಮುಚ್ಚಿದ ಮುಕ್ತಾಯದ ಮ್ಯೂಚುಯಲ್ ಫಂಡ್ ಯೋಜನೆ | (II) ಈ ನಿಧಿ ನಿರಂತರವಾಗಿ ನಗದೀಕರಣಕ್ಕೆ ಮ್ಯೂಚುಯಲ್ ಫಂಡ್ ಮ್ಯಾನೇಜರ್‌ನಿಂದ ಸ್ವೀಕೃತವಾಗುತ್ತವೆ. |
| (c) ಬೆಳವಣಿಗೆ ನಿಧಿ ಯೋಜನೆ | (III) ಇದು ಪ್ರಾದೇಶಿಕ ಅಥವಾ ದೇಶದ ನಿಧಿ ಎಂದು ಕರೆಯಲಾಗುತ್ತದೆ. |
| (d) ಆಫ್ ಶೋರ್ (ಕಡಲಾಚೆಯ) ಮ್ಯೂಚುಯಲ್ ಫಂಡ್ ಯೋಜನೆ | (IV) ಇದರ ಯೋಜನೆಯನ್ನು ಕೊನೆಗೊಳಿಸುವ ತನಕ ಬದಲಾಯಿಸಲು ಸಾಧ್ಯವಿಲ್ಲ. |

ಸರಿಯಾದ ಉತ್ತರವನ್ನು ಆರಿಸಿರಿ:

| | (a) | (b) | (c) | (d) |
|---|---|---|---|---|
| (1) | (II) | (I) | (IV) | (III) |
| (2) | (II) | (IV) | (I) | (III) |
| (3) | (III) | (IV) | (I) | (II) |
| (4) | (III) | (I) | (IV) | (II) |

89. ಆರಂಭಿಕ ದಾಸ್ತಾನು ರೂ. 31,000/–, ಮುಕ್ತಾಯದ ದಾಸ್ತಾನು ರೂ. 29,000/– ಮಾರಾಟ ರೂ. 3,20,000/– ಒಟ್ಟು ಲಾಭದ (Gross profit) ಅನುಪಾತ 25% (ಮಾರಾಟದ ಮೇಲೆ) ಇದ್ದಾಗ ಇದರ ದಾಸ್ತಾನು ವಹಿವಾಟು ಅನುಪಾತವೇನು ?

(1) 31 ಬಾರಿ
(2) 11 ಬಾರಿ
(3) 8 ಬಾರಿ
(4) 32 ಬಾರಿ

90. ವರ್ಷ ಒಂದರಲ್ಲಿ ಉದ್ಯಮವೊಂದು ರೂ. 25,000/– ಡಿಬೆಂಚರ್‌ಗಳು ಮತ್ತು ರೂ. 25,000/– ಷೇರುಗಳ ಹಂಚಿಕೆಯಿಂದ ಖರೀದಿಯಾಗಿದ್ದು, ಆ ವ್ಯಾಪಾರ ಉದ್ಯಮದಲ್ಲಿ ರೂ. 20,000/– ದ ಯಂತ್ರೋಪಕರಣ, ರೂ. 15,000/– ದ ಸಾಲಗಾರರಿಗೆ ಬಾಕಿ, ರೂ. 5,000/–ದ ದಾಸ್ತಾನು ಮತ್ತು ಕೊಡಬೇಕಾದ ಸಾಲ ರೂ. 5,000/– ಇದ್ದರೆ, ನಿಧಿಯ ಹರಿಯುವಿಕೆಯಲ್ಲಿ ಈ ವ್ಯವಹಾರದ ಪರಿಣಾಮವನ್ನು ನಿರ್ಧರಿಸಿ.

(1) ನಿವ್ವಳ ಹೊರ ಹರಿವು ರೂ. 15,000/–
(2) ನಿವ್ವಳ ಒಳಹರಿವು ರೂ. 15,000/–
(3) ಒಳಹರಿವೂ ಇಲ್ಲ ಅಥವಾ ಹೊರಹರಿವೂ ಇಲ್ಲ
(4) ಮೇಲಿನ ಯಾವುದೂ ಅಲ್ಲ

91. 'ನಿಚ್' (Niche) ಮಾರ್ಕೆಟಿಂಗ್ ಈ ಕೆಳಗಿನ ಯಾವುದರಲ್ಲಿ ಸಾಮಾನ್ಯವಾಗಿರುತ್ತದೆ ?

(1) ಸರಕು ಮತ್ತು ಸೇವೆ ಎರಡೂ ರಂಗಗಳಲ್ಲಿ
(2) ಸೇವಾ ರಂಗದಲ್ಲಿ
(3) ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ
(4) ಸಣ್ಣ ಮಾರುಕಟ್ಟೆಗಳಲ್ಲಿ

92. ಮಾರ್ಟ್ (MART) ಅಂದರೆ :

(1) ಮಾರುಕಟ್ಟೆ ಮತ್ತು ಸಂಶೋಧನಾ ತಂಡ
(2) ಮಾರುಕಟ್ಟೆ ಜಾಹೀರಾತು ಮತ್ತು ಸಂಶೋಧನಾ ತಂಡ
(3) ಮಾರುಕಟ್ಟೆ ಮತ್ತು ಸಂಶೋಧನಾ ತಂತ್ರ
(4) ಮೇಲಿನ ಯಾವುದೂ ಅಲ್ಲ

93. ' ಸ್ಪ್ಲಿಟ್ ಹಾಲ್ವ್ಸ್ ಪದ್ಧತಿ ' ಯನ್ನು ಈ ಸಂದರ್ಭದಲ್ಲಿ ಉಪಯೋಗಿಸುತ್ತಾರೆ :

(1) ನೇಮಕಾತಿ
(2) ಆಯ್ಕೆ
(3) ವಿಶ್ವಾಸಾರ್ಹತೆ ಪರೀಕ್ಷೆ
(4) ವ್ಯಕ್ತಿತ್ವ ಪರೀಕ್ಷೆ

94. ____________ ಅಳೆಯಲು ಕಷ್ಟಸಾಧ್ಯವೆನಿಸಿರುವ ಕೌಶಲ್ಯಗಳಾದ ಮನೋಧರ್ಮ ಮತ್ತು ನಡವಳಿಕೆಗಳ ಬಗ್ಗೆ ಕೊಡುವ ತರಬೇತಿಯಿಂದ ಆಗುವ ಅನುಕೂಲಗಳನ್ನು ವಿರ್ಮಶಿಸುವ ಮಾದರಿ :

(1) ಗಾರ್ಡನ್ ಮತ್ತು ಮಿಲ್ಲರ್ಸ್ ಮಾದರಿ
(2) ಕಿರ್ಕ್ ಪ್ಯಾಟ್ರಿಕ್ಸ್ ಮಾದರಿ
(3) ವಾಲ್ಟರ್ಸ್ ಮಾದರಿ
(4) ಸ್ಟೀಫನ್ ರಾಬಿನ್ಸ್ ಮಾದರಿ

95. ' ಪ್ರಿನ್ಸಿಪಾಲ್ ಫೈನಾನ್ಸಿಯಲ್ ಗ್ರೂಪ್ ' 1996 ರಲ್ಲಿ ____________ ನ್ನು ಮತ್ತೆ ಜಾಹೀರಾತು ಮಾಡಿತು.

(1) ತಾಯಂದಿರ ಘಂಟೆಗಳು
(2) ಮಾತೃತ್ವ ರಜೆ
(3) ಶಿಶು ರಕ್ಷಣಾ ಘಂಟೆಗಳು
(4) ಶಿಶು ಪಾಲನಾ ಕೇಂದ್ರಗಳು

96. WTO ನ SCM ಒಪ್ಪಂದವು ____________ ಗೆ ರಫ್ತು ಸಬ್ಸಿಡಿ ನಿರ್ಬಂಧದಿಂದ ವಿನಾಯಿತಿ ನೀಡುತ್ತದೆ.

(1) ಉತ್ಪನ್ನಗಳ ಒಂದು ಪಟ್ಟಿ
(2) ಸೇವೆಗಳ ಒಂದು ಪಟ್ಟಿ
(3) ಕಡಿಮೆ ಆದಾಯದ ದೇಶಗಳು
(4) ಉತ್ಪನ್ನ ಮತ್ತು ಸೇವೆಗಳ ಒಂದು ಪಟ್ಟಿ

97. DFRC ಎಂದರೆ ____________

(1) ಡ್ಯೂಲಿ ಫೈಲ್ಡ್ ರಿಪ್ಲೆನಿಶ್‌ಮೆಂಟ್ ಕಾರ್ಡ್
(2) ಡ್ಯೂಟಿ ಫ್ರೀ ರಿಪ್ಲೆನಿಶ್‌ಮೆಂಟ್ ಕಾರ್ಡ್
(3) ಡ್ಯೂಟಿ ಫ್ರೀ ರಿಪ್ಲೆನಿಶ್‌ಮೆಂಟ್ ಸರ್ಟಿಫಿಕೇಟ್
(4) ಡ್ಯೂಟಿ ಅಂಡ್ ಫ್ರೈಟ್ ರಿಇಂಬರ್ಸ್‌ಮೆಂಟ್ ಕಾರ್ಡ್

98. ಆದೇಶ ನೀಡುವ ಮತ್ತು ಸರಕುಗಳನ್ನು ಪಡೆಯುವ ಸಮಯಗಳ ನಡುವಿನ ಅವಧಿಯನ್ನು ಹೀಗೆ ಕರೆಯಲಾಗುತ್ತದೆ :

(1) ಧಾರಣ ಸಮಯ
(2) ಲೀಡ್ ಸಮಯ
(3) ಖರೀದಿ ಸಮಯ
(4) ಆದೇಶ ಸಮಯ

99. ಎರಡು ಬೆಲೆಗಳ ನಡುವಿನ ವ್ಯತ್ಯಾಸವು ಜಾಬರ್‌ನ ಲಾಭವಾಗಿದ್ದು, ಇದನ್ನು ತಾಂತ್ರಿಕವಾಗಿ ಹೀಗೆ ಕರೆಯಲಾಗುತ್ತದೆ:

(1) ಜಾಬರ್‌ನ ಗಳಿಕೆ (ಗೈನ್)
(2) ಜಾಬರ್‌ನ ಅಂಚು (ಮಾರ್ಜಿನ್)
(3) ಜಾಬರ್‌ನ ಪ್ರತಿಫಲ(ರಿಟರ್ನ್ಸ್)
(4) ಜಾಬರ್‌ನ ತಿರುವು (ಟರ್ನ್)

100. ಹೀಗೆ ಕೊಟ್ಟಾಗ :

$$\sum y = Na + b \sum x$$
$$\sum xy = a \sum x = b \sum x^2$$

ಮೇಲಿನ ಸಮೀಕರಣವು ಇದಕ್ಕೆ ಸಂಬಂಧಿಸಿದೆ :

(1) ಹಿಂಚಲನೆಯ ಸಮೀಕರಣ
(2) ಅನುರೂಪದ ಸಮೀಕರಣ
(3) ಮಾನಕವಿಚಲನೆ
(4) ವಕ್ರತೆ